ತಂದೆಯೊಂದಿಗೆ ಇದೇ ಶಹರಿನಲ್ಲಿ ಇಲ್ಲೇ ಶಾಲೆ ಓದಿಕೊಂಡಿದ್ದ ನೆನಪು. ಅಪ್ಪನೇ ಬೆಳಿಗ್ಗೆ ಅಡುಗೆ ಮಾಡಿ, ತಿನ್ನಿಸಿ ಶಾಲೆಗೆ ಬಿಟ್ಟು ಕೆಲಸಕ್ಕೆ ಹೋಗುತ್ತಿದ್ದರು. ಸಂಜೆ ಶಾಲೆ ಬಿಟ್ಟೊಡನೆ ತಾನೊಬ್ಬಳೇ ಅದೇ ಹಾದಿಯಲ್ಲಿ ಬರುವ ಉಳಿದ ಮಕ್ಕಳೊಡನೆ ಮನೆಗೆ ನಡೆದು ಬರುತ್ತಿದ್ದು, ಅಪ್ಪ ಬರುವ ತನಕ ಮನೆಯ ಹೊರಗೆ ಹಸಿದುಕೊಂಡು ಕಾದು ಕುಳಿತಿರುತ್ತಿದ್ದದ್ದು, ಆತ ಬಂದು ಬಿಸಿ ಬಿಸಿ ಚಹಾ ಮಾಡಿ, ಬಿಸ್ಕತ್ತು ತಿನ್ನಿಸುತ್ತಿದ್ದದ್ದು. ಆಮೇಲೇ ನಾಯಿತೋ? ರಜೆಗೆ ಚಿಕ್ಕಮ್ಮನ್ನ ಊರಿಗೆ ಬಂದವಳು ಮತ್ತೆ ಹಿಂದಿರುಗಲೇ ಇಲ್ಲ. ಅಪ್ಪ ಮತ್ತೆ ಹಿಂತಿರುಗುವುದಿಲ್ಲ ಎಂದು ಚಿಕ್ಕಮ್ಮನ ಮಾತಿನರ್ಥ ಏನೆಂದು ಅರಿವಾಗಲು ವರ್ಷಗಳೇ ಹಿಡಿದಿದ್ದವು. ಏನಾಯಿತು? ಯಾಕಾಯಿತು? ತನಗೊಂದು ತಿಳಿದಿಲ್ಲ! ಹೆತ್ತವರ ನೆರಳು ತನ್ನ ತಲೆಯ ಮೇಲಿಂದ ಸರಿದು ಹೋಗಿತ್ತು.

ಊರಿಗೆ ಹಿಂದಿರುಗಿದರೆ ತನ್ನ ಬದುಕು ಮೂರಾಬಟ್ಟೆಯಾಗುವುದು ಖಂಡಿತ. ಹೇಗೋ ಎರಡು ವರ್ಷ ಎಲ್ಲಾ ಸಹಿಸಿಕೊಂಡು, ತಾಳಿಕೊಂಡು ಹೋಗುವುದೇ ತನಗುಳಿದಿರುವ ಹಾದಿ ಎಂಬುದು ಅಪೂರ್ವಳಿಗೆ ಮನದಟ್ಟಾದ ಬಳಿಕ ಅವಳು ಎದ್ದಳು. ಇಬ್ಬರೂ ಸೇರಿ ಮಧ್ಯಾಹ್ನದ ಊಟದ ತಯಾರಿ ಮುಗಿಸುವ ಹೊತ್ತಿಗೆ ಮಕ್ಕಳು ಎದ್ದರು. ಅವರ ಗಲಾಟೆಗೆ ಶಂಕರನೂ ಎದ್ದು ಬಂದ. ಎಲ್ಲರೂ ಸ್ನಾನ ಮುಗಿಸಿ ಊಟ ಮುಗಿಸಿದರು. ಶಂಕರ ಊರು ಸುತ್ತಾಡಲು ಹೊರಟಾಗ ಮಕ್ಕಳೂ ಅವನ ಬಳಿ ತಾವು ಬರುವುದಾಗಿ ದುಂಬಾಲು ಬಿದ್ದರು. ಅರೆ ಮನಸ್ಸಿನಿಂದಲೇ ಶಂಕರ ಮಕ್ಕಳೊಂದಿಗೆ ಸುತ್ತಾಡಲು ಹೊರಟ. ವಸುಮತಿಗೆ ಆಸಕ್ತಿ ಇರದ್ದರಿಂದ ಆಕೆ ಅಪೂರ್ವಳೊಂದಿಗೆ ಮನೆಯಲ್ಲೇ ಉಳಿದಳು.

ಡಾ. ಆದರ್ಶ ಅಪೂರ್ವಳ ಮೊಬೈಲಿಗೆ ಕರೆ ಮಾಡಿ 'ಅತ್ತೆ ನಿಮ್ಗೆ ಫೋನ್ ಮಾಡಲು ತಿಳಿಸಿದ್ದರು. ಅದಕ್ಕೇ ಕಾಲ್ ಮಾಡ್ತೀದ್ದೀನಿ. ಮಾವನನ್ನು ವಾರ್ಡ್‌ಗೆ ಹಾಕಿದ್ದಾರೆ' ಎಂದ. ಅವಳಿಗೆ ಮುಂದೆ ಮಾತನಾಡಲು ಅವಕಾಶ ನೀಡದೇ ಸಂಪರ್ಕ ಕಡಿದಿದ್ದ. ಅವನ ಮೇಲೆ ತಾನು ರೇಗಿದ್ದರ ಪರಿಣಾಮ ಅವನು ಹಾಗೆ ಬಿಗುವಾಗಿ ವರ್ತಿಸಿದ್ದನೆಂದು ಅವಳಿಗೆ ಅರಿವಾಗಿತ್ತು.

ಪ್ರಭಾಕರ ರಾಯರನ್ನು ನೋಡುವ ಕಾತರ ತಾಳಲಾರದೇ ಅಪೂರ್ವ ಮತ್ತೆ ಆಸ್ಪತ್ರೆಗೆ ಹೊರಟಾಗ, ವಸುಮತಿ ತಾನೂ ಅಪೂರ್ವಳೊಂದಿಗೆ ಆಸ್ಪತ್ರೆಗೆ ಹೊರಟರು. ಇಬ್ಬರೂ ಬಸ್ಸು ಹಿಡಿದು ಆಸ್ಪತ್ರೆ ಸೇರುವಾಗ ಮೂರು ಗಂಟೆ ಯಾಗಿತ್ತು. ಲಿಫ್ಟ್ ಮೂಲಕ ಮೇಲಿನ ಅಂತಸ್ತಿಗೆ ಬಂದು ರಾಯರಿದ್ದ ವಾರ್ಡ್‌ಗೆ ಬಂದಾಗ ಅವರು ನಿದ್ದೆ ಹೋಗಿದ್ದರು. ಎರಡೇ ದಿನಗಳಲ್ಲಿ ಸಾಕಷ್ಟು ಇಳಿದು ಹೋಗಿದ್ದರು. ಮದ್ದಿನ ಪರಿಣಾಮವೋ, ಚಿಂತೆಯ ಭಾರಕ್ಕೋ, ಅಂತೂ ಹಣ್ಣಾದವರಂತೆ ಕಂಡು ಬಂದರು. ಪಕ್ಕದಲ್ಲಿ ಕುಳಿತಿದ್ದ ವಿಜಯಮ್ಮ ಸದ್ದು ಮಾಡದಂತೆ ಕೈ ಸನ್ನೆ ಮಾಡಿದಾಗ, ಇಬ್ಬರೂ ಸಶಬ್ದವಾಗಿ ಅವರೆದುರಿನ ಸಣ್ಣ ಮಂಚದಲ್ಲಿ ಕುಳಿತು, ಡ್ರಿಪ್ ಚುಚ್ಚಿಸಿಕೊಂಡು ಮಲಗಿದ್ದ ರಾಯರನ್ನೇ ನೋಡುತ್ತ ಕುಳಿತುಕೊಂಡರು. ಸಣ್ಣ ನಿದ್ದೆ ತೆಗೆದು ಎಚ್ಚೆತ್ತ ರಾಯರು, ವಸುಮತಿಯವರನ್ನು ಕಂಡು 'ಯಾವಾಗ ಬಂದ್ರಿ? ಎಂದು ವಿಚಾರಿಸಿದರು.

'ಬೆಳಿಗ್ಗೆ ಬಂದೆವು. ನಿಮ್ಮ ಅನಾರೋಗ್ಯದ ವಿಚಾರ ಅಪೂರ್ವ ತಿಳಿಸಿದಳು, ನೋಡಿ ಹೋಗೋಣಾಂತ ನಾವೆಲ್ಲ ಬಂದ್ವಿ. ಇವ್ರು, ಮಕ್ಳು ಆಚೆ ಹೋಗಿದ್ದಾರೆ' ಎಂದರು.

ಸ್ವಲ್ಪ ಹೊತ್ತು ಮೌನ ಆವರಿಸಿತು. 'ಸೂರ್ಯನ ಬಗ್ಗೆ ಏನಾದ್ರೂ ಗೊತ್ತಾಯ್ತಾ?' ರಾಯರು ತಡೆ ತಡೆದು, ಅಪೂರ್ವಳನ್ನುದ್ದೇಶಿಸಿ ಪ್ರಶ್ನಿಸಿದರು. ಅಪೂರ್ವಳಿಗೆ ಬಾಯಿ ಕಟ್ಟಿದಂತಾಯಿತು.

'ಏನೆಂದು ಹೇಳುವುದು, ಪೊಲೀಸ್ ಠಾಣೆಯಿಂದ ಹೊರ ಬಂದು, ಸ್ವಂತ ಮನೆಯಿಂದಲೇ ಕಳ್ಳತನ ಮಾಡಿ ಹೋಗಿದ್ದಾನೆಂದು ಹೇಳುವುದೇ? ಮೊದಲೇ ರಾಯರಿಗೆ ಮಗನ ತಲೆ ಕಂಡರಾಗದು. ಈ ವಿಚಾರ ತಿಳಿದು ಅವರ ಮನಸ್ಸು ಇನ್ನಷ್ಟು ಹುಳಿಯಾದೀತು..! ಇನ್ನು ಠಾಣೆಯಲ್ಲೇ ಇರುವನೆಂದು ಹೇಳಿದರೆ ಆತನ ಮೇಲೆ ಇದ್ದ ಕಳ್ಳತನ ಅಪವಾದಕ್ಕೆ ಪುಷ್ಟಿ ನೀಡಿದಂತಾಗುವುದು ಎನಿಸಿತು.

'ಅವ್ರೇನೂ ತಪ್ಪು ಮಾಡಿಲ್ಲವೆಂದು ಅವರನ್ನು ಪೊಲೀಸರು ಬಿಟ್ಟು ಬಿಟ್ಟಿದ್ದಾರಂತೆ' ಅಪೂರ್ವಳ ಮಾತು ಮುಗಿಯುತ್ತಲೂ, ವಿಜಯಮ್ಮ ಪ್ರಸನ್ನರಾಗಿ,'ಕೇಳಿಸಿಕೊಂಡ್ರಾ? ಈಗಲಾದರೂ ಸೂರ್ಯನ ಬಗ್ಗೆ ನಿಮ್ಗೆ ನಂಬಿಕೆ ಬಂತಾ? ನಾನು ಹೇಳಿಲ್ವಾ ನಿಮ್ಗೆ? ಅವ್ನು ಅಂಥವನಲ್ಲ ಅಂತ. ಪೂರ್ವಾಗ್ರಹ ಪೀಡಿತರಾಗಿ ನೋಡಿದ್ರೆ ಪ್ರತಿಯೊಂದೂ ತಪ್ಪಾಗಿಯೇ ಕಾಣ್ಸುತ್ತೆ ನಿಮ್ಗೆ. ಈಗೇನಂತೀರಾ ನೀವು?' ರಾಯರು ಮೌನದ ಮೊರೆ ಹೊಕ್ಕರು.

ವಿಜಯಮ್ಮ ಮಾತು ಮುಂದುವರಿಸುತ್ತಾ,'ಅವ್ನಿಂದ ಒಂದು ತಪ್ಪು ತಿಳೀದೇ ನಡೆದು ಹೋಯ್ತು.ಅದಕ್ಕೆ ಅವ್ನು ಶಿಕ್ಷೆ ಅನುಭವಿಸಿದ್ದಾನೆ. ಅದಕ್ಕಾಗಿ ಅವ್ನನ್ನ ದೂರ ಇಟ್ಟು ನಾವೂ ಶಿಕ್ಷೆ ಅನುಭವಿಸಿದ್ವಿ. ಅವ್ನಿಗೂ ತಪ್ಪಿನ ಅರಿವಾಗಿದೆ. ಇನ್ನೂ ಅವ್ನನ್ನ ದೂರ ಮಾಡಿ ಅವ್ನೂ, ನಾವೂ ಮಾನಸಿಕ ವೇದನೆ ಅನುಭವಿಸುವುದರಲ್ಲಿ ಯಾವ ಅರ್ಥವಿದೆ ಹೇಳಿ? ಅವನಿಗೆ ಮತ್ತೊಂದು ಅವಕಾಶ ಕೊಡೋಣ. ತುಂಬಾ ಒರಟನಾಗಿದ್ದಾನೆ. ನಮ್ಮ ಪ್ರೀತಿಗಾಗಿ ಹಂಬಲಿಸ್ತಿದ್ದಾನೆ. ನೀವು ಇದಕ್ಕೆ ಒಪ್ಪಿಗೆ ನೀಡಲೇ ಬೇಕು' ವಿಜಯಮ್ಮ ಆರ್ದ್ರವಾಗಿ ಪತಿಯತ್ತ ನೋಡುತ್ತ ನುಡಿದರು. ಪತ್ನಿಯ ಮಾತಿಗೆ ಸೋತವರಂತೆ ರಾಯರು, 'ಆಗ್ಲಿ, ವಿಜಯಾ.. ಇಷ್ಟು ದಿನ ತಾಯಿ ಮಗನ ನಡುವೆ ನಾನು ತಡೆಗೋಡೆಯಾಗಿದ್ದೆ. ನಿನ್ನ ಮಮತೆಗೆ ನೀನು ಕಟ್ಟಿದ್ದ ಅಣೆಕಟ್ಟು ಈಗ ಅವನನ್ನು ಇಷ್ಟು ವರ್ಷಗಳ ನಂತರ ಕಂಡು ಈಗ ತೆರೆದ ಹಾಗಾಗಿದೆ. ಅದನ್ನು ತಡೆಯುವ ಶಕ್ತಿ ನನಗೂ ಇಲ್ಲ. ತಾಯಿ ಮಗನ ನಡುವೆ ಬರೋದಿಕ್ಕೆ ನಾನ್ಯಾರು?' ರಾಯರು ವಿಚಲಿತರಾದಂತೆ ಕಂಡು ಬಂದರು. ಕಂಡೂ ಕಾಣದ ಕಹಿಯ ಲೇಪನ ಅವರ ಮಾತಿನಲ್ಲಿತ್ತು.

'ಅವ್ನು ನಿಮಗೂ ಮಗನಲ್ಲವೇನು? ಅವನನ್ನು ದಂಡಿಸುವುದನ್ನು ಬಿಟ್ಟು ಪ್ರೀತಿಯಿಂದ ಕಾಣಿ. ಅವ್ನು ಆಗ ಸರಿ ಹೋಗದಿದ್ರೆ ಕೇಳಿ. ಪ್ರೀತಿಗೆ ಸೋಲದವರು ಯಾರಿದ್ದಾರೆ ಈ ಪ್ರಪಂಚದಲ್ಲಿ? ನಾವು ಅವನನ್ನು ಸ್ವೀಕರಿಸಲಿಲ್ಲ ಎನ್ನುವ ನೋವೇ ಹೆಚ್ಚಾಗಿ ಅವನನ್ನು ಸುಡ್ತಾ ಇದೆ. ನಾವು ಅವನನ್ನು ಒಪ್ಕೊಂಡಿ ರೋದು ಗೊತ್ತಾದ್ರೆ ಬೇಡ ಅಂದ್ರೂ ಅವ್ನು ಸರಿ ಹೋಗ್ತಾನೆ' ವಿಜಯಮ್ಮನ ಮುಖದಲ್ಲಿ ಈಗ ಬೆಳಕು ಮೂಡಿದಂತಾಗಿತ್ತು.

ಅರೆ ಮನಸ್ಸಿನಿಂದಲಾದರೂ ಪತಿ ನೀಡಿದ ಒಪ್ಪಿಗೆ, ಅವರ ಇಷ್ಟು ವರ್ಷಗಳ ಚಿಂತೆಗೆ ತೆರೆ ಎಳೆದಂತಾಗಿತ್ತು. ಮಗ ತನ್ನೊಡನೆ ಇರುವೆನೆಂದ ಬಳಿಕ ತಾಯಿ ಹೃದಯಕ್ಕೆ ಸಮಾಧಾನ ಮೂಡದೇ ಇರುವುದೇ? ಇಷ್ಟು ವರ್ಷಗಳ ಆಕೆಯ ಅಗಲಿಕೆಯ ತಾಪಕ್ಕೆ ಈಗ ತಂಪೆರೆಚಿದಂತಾಗಿತ್ತು.

'ಸೂರ್ಯ ಮನೆಗೆ ಬಂದಿದ್ದಾನಾ?' ಆಕೆ ಕಾತುರದಿಂದ ವಿಚಾರಿಸಿದಾಗ, ಅಪೂರ್ವಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದೇ ತಿಳಿಯದಾಯಿತು. ರಾಯರು ದೊಡ್ಡ ಮನಸ್ಸು ಮಾಡಿ ಮಗನನ್ನು ಜೊತೆಗೆ ಇರಿಸಿಕೊಳ್ಳಲು ಒಪ್ಪಿದ್ದಾರೆ. ವಿಜಯಮ್ಮನ ಮುಖದ ಮೇಲೆ ಇಷ್ಟು ವರ್ಷಗಳ ನಂತರ ಮಗನೊಡನೆ ವಾಸಿಸುವ ಸಂಭ್ರಮ ಮೂಡಿದೆ. ಛಿದ್ರವಾದಂತಿದ್ದ ಕುಟುಂಬಕ್ಕೆ ಈಗೊಂದು ಚೌಕಟ್ಟು ದೊರಕಿದೆ. ಎಲ್ಲಾ ಒಂದಾಗುವ ಹಂತ ತಲುಪಿರುವಾಗ ಯಾವ ಬಾಯಲ್ಲಿ ಸೂರ್ಯನ ಕೃತ್ಯ ತಿಳಿಸಲಿ? ತಿಳಿಸಿದರೆ ಪರಿಣಾಮ ಮತ್ತೆ ವಿಕೋಪಕ್ಕೆ ಹೋದೀತು? ರಾಯರು ಮತ್ತೆ ಮನಸ್ಸು ಬದಲಿಸಿಯಾರು. ವಿಜಯಮ್ಮನಿಗೆ ಮತ್ತದೇ ನೋವು, ನರಳಾಟ ಪುನರಾವರ್ತನೆಯಾದೀತು. ಬೇಡ.. ತನಗೆ ಅನ್ನ ಹಾಕಿ, ವಿದ್ಯೆ ಕಲಿಸುತ್ತಿರುವ ಈ ಸಂಸಾರ ಸುಖವಾಗಿ, ಆನಂದದಿಂದ ನಗು ನಗುತ್ತಿರಬೇಕು. ಸದ್ಯದ ಸ್ಥಿತಿಯಲ್ಲಿ ತಾನೇನೂ ಹೇಳದಿರುವುದೇ ಒಳಿತು. ಸೂರ್ಯ ಮನೆಗೆ ಬಂದಾಗ ಆತನಿಗೂ ತನ್ನ ತಂದೆ ಮನೆಯಲ್ಲಿರಲು ಒಪ್ಪಿದ್ದಾರೆ. ತನ್ನನ್ನು ಮನಸ್ಪೂರ್ವಕ ಸ್ವೀಕರಿಸುತ್ತಿರುವರೆಂದು ತಿಳಿದರೆ ಆತನೂ ಸರಿ ಹೋದಾನು ಎಂದೆನಿಸಿತು.

'ಇಲ್ಲ ..ನಾನು ಸ್ಟೇಷನ್‌ಗೆ ಹೋಗಿದ್ದೆ... ಸೂರ್ಯನಿಗೆ ಅಲ್ಲಿಂದ ಕಳಿಸಿ ಕೊಟ್ಟಿದ್ದಾರೆ..' ಎಂದಳು.

'ಹಾಗಾದ್ರೆ ಅವ್ನು ಮನೆಗೆ ಬಂದು ಬೀಗ ಹಾಕಿರೋದನ್ನು ಕಂಡು ವಾಪಸ್ಸು ಹೋಗಿರಬೇಕು.. ಎಲ್ಲಿಗೇ ಹೋದ್ನೋ..? ಏನ್ಮಾಡ್ತಿದ್ದಾನೋ..?' ವಿಜಯಮ್ಮ ತಳಮಳಿಸಿದರು.

'ನೀವಿಬ್ರೂ ಹೊರಡಿ ಹಾಗಾದ್ರೆ, ಸೂರ್ಯ ಮನೆಗೆ ಬಂದ್ರೆ ಅವ್ನಿಗೆ ಹೇಳು, ಅವ್ನ ಅಪ್ಪನಿಗೆ ಅವ್ನು ಮನೆಗೆ ಬಂದಿರೋದು ಯಾವ ಸಮಸ್ಯೆನೂ ಇಲ್ಲ. ಅವ್ರೂ ಮನಸ್ಪೂರ್ವಕ ಒಪ್ಪಿದ್ದಾರೆ ಅಂತ. ಸದ್ಯ ದೇವ್ರು ದೊಡ್ಡವನು, ಎಲ್ಲಾ ಸರಿ ಹೋಯ್ತಲ್ವಾ..?' ವಿಜಯಮ್ಮ ಪ್ರಸನ್ನತೆಯಿಂದ ಕುಳಿತಲ್ಲೇ ಕೈ ಮುಗಿದರು. ಆದರೆ ರಾಯರ ಮುಖದಲ್ಲಿ ಅಪೂರ್ವಳಿಗೆ ಆ ಹಾರ್ದಿಕತೆ ಕಾಣಲಿಲ್ಲ. ಪತ್ನಿಯ ಒತ್ತಾಯಕ್ಕೆ ಅವರು ಮಣಿದಂತಿತ್ತು. ವಿಜಯಮ್ಮನ